

ಮಾರ್ಗ ಎಂಬಂತೆ ಬಿಂಬಿಸಲಾಗುತ್ತಿದೆ.

ಹೆಣ್ಣೊಬ್ಬಳು ಬಾಲ್ಯದಿಂದ ಹರೆಯಕ್ಕೆ ಕಾಲಿಡುತ್ತಿರುವಾಗಲೇ ಆಕೆಗೆ ಕಟ್ಟುಪಾಡುಗಳು ಶುರುವಾಗುತ್ತವೆ. ಎಂಥ ಬಟ್ಟೆ ತೊಡಬೇಕು, ಎಲ್ಲಿ ಹೇಗೆ ಕೂಡಬೇಕು, ನಿಲ್ಲಬೇಕು, ನಗಬೇಕು, ಎಲ್ಲಿ ಯಾರ ಜೊತೆ ಹೇಗೆ ಮಾತನಾಡಬೇಕು ಅಥವಾ ಮಾತನಾಡಬಾರದು, ಮುಟ್ಟಿನ ದಿನಗಳಲ್ಲಿ ಹೇಗೆ ವರ್ತಿಸಬೇಕು, ಎಲ್ಲೆಲ್ಲಿ ಮುಟ್ಟಬೇಕು ಅಥವಾ ಮುಟ್ಟಬಾರದು, ಎಲ್ಲೆಲ್ಲಿ ಹೋಗಬಹುದು ಅಥವಾ ಹೋಗಕೂಡದು, ಏನನ್ನು ಓದಬೇಕು, ಎಂಥ ಕೆಲಸವನ್ನು ಎಲ್ಲಿ ಹಿಡಿಯಬೇಕು, ಎಂಥ ಸಂಗಾತಿಯನ್ನು ಆಯ್ದುಕೊಳ್ಳಬೇಕು, ಎಷ್ಟನೆಯ ವಯಸ್ಸಿಗೆ ಯಾರಿಂದ ಎಷ್ಟು ಮಕ್ಕಳನ್ನು ಪಡೆಯಬೇಕು, ನಂತರ ಅವರನ್ನು ಹೇಗೆ ಬೆಳೆಸಬೇಕು, ಯಾವ ನೀತಿಗಳನ್ನು ಮಕ್ಕಳಿಗೆ ಹೇಳಿಕೊಡಬೇಕು, ಮಗು ಗಂಡಾದರೆ ಹೇಗೆ ಬೆಳೆಸಬೇಕು, ಹೆಣ್ಣಾದರೆ ಹೇಗೆ ಬೆಳೆಸಬೇಕು... ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಎಷ್ಟೋ ಬಾರಿ ಯಾರೂ ಹೇಳಿ ಕೊಡದೆಯೇ ಈ ಕಲ್ಪಿತ ನಿಯಮಗಳನ್ನು ಹೆಣ್ಣು ಎಳವೆಯಲ್ಲಿಯೇ ಕಲಿತುಬಿಡುತ್ತಾಳೆ. ಅಥವಾ ಒತ್ತಾಯದಿಂದಾದರೂ ಆಕೆಗದನ್ನು ಕಲಿಸಲಾಗುತ್ತದೆ.

ನಿಯಮಗಳನ್ನು ಶಿರಸಾವಹಿಸಿ ಪಾಲಿಸಿದವರಿಗೆ ಪತಿವ್ರತೆ, ಮುತ್ತೈದೆ ಮುಂತಾದ ಕೆಲಸಕ್ಕೆ ಬಾರದ ಬಿರುದುಗಳಿಂದ ಸನ್ಮಾನಿಸಲಾಗುತ್ತದೆ. ನಿಯಮ ಉಲ್ಲಂಘಿಸಿದವರಿಗೆ ಕುಲಟೆಯ ಪದವಿ ಕೊಡಲಾಗುತ್ತದೆ. ಸಂತಾನಶಕ್ತಿ ಹೊಂದಿರುವ ಹೆಣ್ಣು ಹೇಗಿರಬೇಕು ಮತ್ತು ಹೇಗಿರಬಾರದು ಎಂಬುದಕ್ಕೆ ಈ ಎರಡು ನಿದರ್ಶನಗಳನ್ನು ಕೊಟ್ಟು ತೀರ್ಪನ್ನೂ ಬರೆಯಲಾಗುತ್ತದೆ. 'ಆಧುನಿಕ ಮಹಿಳೆ' ಎನ್ನುವುದು ಟೊಳ್ಳು ಸಂಸ್ಕೃತಿ ರಕ್ಷಕರ ನಿಘಂಟಿಗೆ ಸೇರಿರುವ ಲೇಟೆಸ್ಟ್ ಬೈಗುಳ! ಕೆಲವು ವರ್ಷಗಳ ಹಿಂದೆ 'ಬುದ್ಧಿಜೀವಿ' ಎಂಬ ಪದವೂ ಈ ಯಾದಿಗೆ ಸೇರ್ಪಡೆಯಾಗಿತ್ತು.

ಈ ಕಲ್ಪಿತ ನಿಯಮಗಳನ್ನು ಸೃಷ್ಟಿಸುವವರು ಯಾರು ಹಾಗಾದರೆ? ಸಮಾಜವೆಂದರೆ ಅಲ್ಲೆಲ್ಲೋ ದೂರದಲ್ಲಿ ಕುಳಿತಿರುವ, ನಮ್ಮನ್ನು ನಿಯಂತ್ರಿಸುತ್ತಿರುವ ಒಂದು ಸಮೂಹವಲ್ಲ. ಸಮಾಜವೆಂದರೆ ನಮ್ಮದೇ ತಂದೆ, ತಾಯಿ, ಸಂಬಂಧಿಕರು, ಹಿರಿಯರು, ಪಾಠ ಹೇಳಿಕೊಡುವ ಗುರುಗಳು, ಸ್ನೇಹಿತರು, ಪರಿಚಯದವರು, ಆಗಂತುಕರು ಮತ್ತು ಸ್ವತಃ ನಾವು ಸೇರಿಯೇ ಸಮಾಜ ಸೃಷ್ಟಿಸಿಕೊಂಡಿದ್ದೇವೆ. ಸಮಾಜವೆನ್ನುವುದು ಪರಸ್ಪರ ಕೊಡುಕೊಳ್ಳುವಿಕೆಯ ಮೂಲಕ ಎಲ್ಲರೂ ನೆಮ್ಮದಿ ಕಂಡುಕೊಳ್ಳಲು ನಾವೇ ಕಟ್ಟಿಕೊಂಡ ಮನೆಯೇ ಹೊರತು ಇನ್ನೇನಲ್ಲ. ಈ ಹೊಸ ಕಾಲಕ್ಕೆ ತಕ್ಕಂತೆ ಸಮಾಜವೆನ್ನುವ ಈ ಮನೆಗೂ ನವೀಕರಣದ (ರಿನೊವೇಶನ್) ಅವಶ್ಯಕತೆಯಿದೆ. ಕಾಲಕಾಲಕ್ಕೆ ಜೀರ್ಣೋದ್ಧಾರವಾಗದೇ ಯಾವ ಆಲಯವೂ ಉಳಿಯದು ಅಲ್ಲವೇ?

## ಮದುವೆಯೇಕೆ ಬೇಡ?

ಕೆಲವು ಸ್ತ್ರೀಯರು ಯಾಕೆ ಮದುವೆ ಆಗುತ್ತಿಲ್ಲ? ಏಕೆಂದರೆ, ಯಾರಿಗೂ ಈಗ ಮದುವೆ ಎಂಬುದು ಏಕಮಾತ್ರ ಆಯ್ಕೆಯಾಗಿ ಉಳಿದಿಲ್ಲ. ಇಷ್ಟು ವರ್ಷ ಇಷ್ಟವಿರಲಿ, ಇಲ್ಲದಿರಲಿ ಸಮಾಜದಲ್ಲಿ ಗೌರವದಿಂದ ಇರಲು (ಮುಖ್ಯವಾಗಿ ಹೆಂಗಸರು) ಮದುವೆ ಎಂಬ ಚೌಕಟ್ಟಿನಲ್ಲೇ ಬದುಕಬೇಕು ಎಂಬ ಭ್ರಮೆ ಜನಜನಿತವಾಗಿತ್ತು. ಕ್ರಮೇಣ ಹೆಣ್ಣು ಶಿಕ್ಷಣದ ಮೆಟ್ಟಿಲೇರುತ್ತ, ಆ ಮೂಲಕ ಆರ್ಥಿಕವಾಗಿಯೂ ಸ್ವಾವಲಂಬಿಯಾದಾಗ, ಜೊತೆಗೆ ತಂದೆ ತಾಯಿ ಬಂಧುಗಳಿಗೆ ಹೆದರಿ